# ವಾರ್ಡ್ ಸಭೆ ಸಂಖ್ಯೆ.09

ದಿನಾಂಕ: 06.02.2021 ರಂದು ಸಮಯ ಬೆಳಿಗ್ಗೆ 11.00 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಅಧ್ಯಕ್ಷರು) ರವರು ಮತ್ತು ವಾರ್ಡ್ ಅಭಿಯಂತರರು (ಕಾರ್ಯದರ್ಶಿಗಳು) ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀಮತಿ ಕೆ ಸ್ವಯಂಪ್ರಭಾ, ಅದೀಕ್ಷಕ ಅಭಿಯಂತರರು (ಪಶ್ಚಿಮ) ವಲಯ **(ಅಧ್ಯಕ್ಷರು)**
2. ಶ್ರೀ ರಾಮದಾಸಪ್ಪ ಕೆ.ಬಿಸಹಾಯಕ ಕಾರ್ಯಪಾಲಕ ಅಭಿಯಂತರರು ಮಹಾಲಕ್ಷ್ಮೀಪುರಂ ಉಪವಿಭಾಗ.
3. ಶ್ರೀ. ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. **(ಕಾರ್ಯದರ್ಶಿ)**
4. ಶ್ರೀ ಜಯಪಾಲ್ ಸದಸ್ಯರು.
5. ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
6. ಶ್ರೀಮತಿ ಪ್ರೇಮ ಸದಸ್ಯರು.
7. ಕುಮಾರಿ ಕಮಲ ಸದಸ್ಯರು.
8. ಶ್ರೀ ನಂಜೇಗೌಡ ಬಿ.ವಿ ಸದಸ್ಯರು.
9. ಶ್ರೀ ರಾಜೇಶ್ ಸದಸ್ಯರು.
10. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
11. ಶ್ರೀ ಡಾ॥ ನಾಗೇಂದ್ರ ಸದಸ್ಯರು.
12. ಶ್ರೀ ಗೋಪಿ ಸದಸ್ಯರು.
13. ಶ್ರೀಮತಿ ರಶ್ಮಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ಮಹಾಲಕ್ಷ್ಮೀಪುರಂ ವಿಭಾಗ.
14. ಶ್ರೀ ಜಿ.ಕೆ ವೆಂಕಟೇಶಯ್ಯ ಕೆಲಸ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
15. ಶ್ರೀ ವಿಠಲ್, ಬಿ.ಡಬ್ಲ್ಯೂ.ಎಸ್.ಎಸ್.ಬಿ ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ
16. ಶ್ರೀ ದಿನೇಶ್ ಕುಮಾರ್ಸಹಾಯಕ ಅಭಿಯಂತರರು, ಬೆಸ್ಕಾಂ ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ
17. ಶ್ರೀ ಶಿವರಾಂ, ವಲಯ ಸಂರಕ್ಷಣಾಧಿಕಾರಿಗಳು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ
18. ಶ್ರೀ ನಾಸೀರ್ ಬೀದಿ ದೀಪ ಗುತ್ತಿಗೆ ದಾರರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ
19. ಶ್ರೀ ಬಾಸ್ಕರ್, ಕಂದಾಯ ವಸೂಲಿಗಾರರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ
20. ಶ್ರೀ ದೇವಣ್ಣ, ಮಾರ್ಷಲ್ ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
21. ಶ್ರೀ ನಂದಿನಿ ಲೇಔಟ್ ಪೋಲೀಸ್ ಅಧಿಕಾರಿ, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.

ಶ್ರೀ ಧನಂಜಯ ಜಿ.ಟಿ ಕಾರ್ಯದರ್ಶಿಗಳು ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಇತರೆ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

1. ಮಾನ್ಯ ಕಾರ್ಯದರ್ಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು.
2. ಗೌತಮನಗರದಲ್ಲಿ ವಿದ್ಯುತ್ ಕಂಬ ತುಕ್ಕು ಹಿಡಿದಿರುವುದರಿಂದ ಕಂಬವನ್ನು ಬದಲಾಯಿಸಬೇಕು ಎಂದು ಶಂಕರನಗರ ವೇದಿಕೆಯ ರಾಜೇಶ್ ರವರು ಕೋರಿದರು. ಮಾನ್ಯ ಅಧ್ಯಕ್ಷರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗುವುದು ಎಂದು ತಿಳಿಸಿದರು.

Scanned with CamScanner

3. ಬೆಸ್ಕಾಂ ಅಧಿಕಾರಿಗಳಿಗೆ ಅಗೆದ ರಸ್ತೆಗಳನ್ನು ಮುಚ್ಚಲಾಗಿದೆಯೆ ಎಂದು ಬೆಸ್ಕಾಂ ಅಧಿಕಾರಿಗಳಿಗೆ ಕೇಳಿದರು. ಇದಕ್ಕೆ ಬೆಸ್ಕಾಂ ಅಧಿಕಾರಿಗಳು ಗುಂಡಿಗಳಿಗೆ ಮಣ್ಣು ಹಾಕಿ ಮುಚ್ಚಲಾಗಿದೆ, ಡಾಂಬರು ಹಾಕಿಸುತ್ತೀವಿ ಎಂದು ತಿಳಿಸಿದರು.

4. ಪಾದಚಾರಿ ಮಾರ್ಗಗಳಲ್ಲಿ ಟ್ರಾನ್ಸ್‌ಫಾರ್ಮರ್‌ಗಳನ್ನು ಪಾದಚಾರಿ ಮಾರ್ಗಗಳಲ್ಲಿ ಮತ್ತು ರಸ್ತೆ ಬದಿಗಳಲ್ಲಿ ನಿರ್ಮಿಸಲಾಗಿರುತ್ತದೆ ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುತ್ತದೆ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಸಂಬಂದಪಟ್ಟ ಬೆಸ್ಕಾಂ ಅಧಕಾರಿಗಳಿಗೆ ಸಮಸ್ಯೆಯನ್ನು ಪರಿಹರಿಸಲು ಸೂಚಿಸಿದರು.

5. ಡಾ|| ನಾಗೇಂದ್ರ ರವರು ಸಭೆಯಲ್ಲಿ ಕೊಳವೆ ಬಾವಿಗಳನ್ನು ನಿರ್ವಹಿಸುವುದರ ಬಗ್ಗೆ ಮಾಹಿತಿ ಕೋರಿದರು, ಸಾರ್ವಜನಿಕರಿಗೆ ಕೊಳವೆ ಬಾವಿಗಳ ನೀರಿನ ಬಿಲ್ಲು ಎಂದು ರೂ.200 ಗಳನ್ನು ಹೆಚ್ಚು ಹಣ ವಿಧಿಸಿರುತ್ತೀರಿ ಆದರೆ ಸಾರ್ವಜನಿಕರಿಗೆ ಕೊಳವೆ ಬಾವಿಗಳಿಂದ ಯಾವುದೇ ರೀತಿ ನೀರನ್ನು ಸರಬರಾಜು ಮಾಡಿರುವುದಿಲ್ಲ ಎಂದು ತಿಳಿಸಿದರು. ಆದರೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರು ಸಭೆಯಲ್ಲಿ ಹಾಜರಿರಲಿಲ್ಲ. ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯಿಂದ ಬಂದವರು ಸಹಾಯಕ ಅಭಿಯಂತರರಿಗೆ ತಿಳಿಸುವುದಾಗಿ ಹೇಳಿದರು.

6. ಬೆಲ್ ಅಪಾರ್ಟ್‌ಮೆಂಟ್ ನಿವಾಸಿರವರು ಭೆಲ್ ಅಪಾರ್ಟ್‌ಮೆಂಟ್ ಹತ್ತಿರ ನೋ ಪಾರ್ಕಿಂಗ್ ಬೋರ್ಡ್ ಹತ್ತಿರ ಟೊಯೋಟ ಶೋರೂಂ ರವರು ಸರ್ವೀಸ್‌ಗೆ ನೀಡಿದ ಕಾರುಗಳನ್ನು ತೊಳೆದ ನಂತರ ರಸ್ತೆ ಮೇಲೆ ನಿಲ್ಲಿಸುತ್ತಿರುತ್ತಾರೆ ಇದರಿಂದ ರಸ್ತೆಯು ಹಾಳಾಗುತ್ತಿದೆ ಹಾಗೂ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿರುತ್ತದೆ ಎಂದು ತಿಳಿಸಿದರು ಹಾಗೂ ಬೆಲ್‌ಅಪಾರ್ಟ್‌ಮೆಂಟ್ ಹತ್ತಿರು ವಿದ್ಯುತ್ ದೀಪ ಉರಿಯುತ್ತಿರುವುದಿಲ್ಲ ಎಂದು ತಿಳಿಸಿದರು. ಕಾರ್ಯದರ್ಶಿಗಳು ಸಂಬಂದಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗುವುದು ಎಂದು ತಿಳಿಸಿದರು.

7. ಶ್ರೀ ಸಿದ್ದರಾಜು ರವರು ಸೋಮೇಶ್ವರ ನಗರದಲ್ಲಿ ಚರಂಡಿ ಮತ್ತು ಒಳಚರಂಡಿ ರಲ್ಲಿ ಹೂಳು ತುಂಬಿಕೊಂಡಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು. ಇದಕ್ಕೆ ವಾರ್ಡ್ ಅಭಿಯಂತರರು ಚರಂಡಿಯನ್ನು ಹೊಸದಾಗಿ ನಿರ್ಮಿಸಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

8. ಶ್ರೀ ವೈ ಆರ್ ವೆಂಕಟೇಶ್ ರವರು ಗಜಾನನ ಸ್ಲಂ–1 ಮತ್ತು ಅಗ್ನಿಶಾಮಕ ಕೇಂದ್ರದಿಂದ ಉಲ್ಲಾಸ್ ಚಿತ್ರ ಮಂದಿರ ಕಡೆಗೆ ಬರುವ ರಸ್ತೆಯಲ್ಲಿ ಕಟ್ಟಡ ಕಟ್ಟುವರು ರಸ್ತೆಗಳಲ್ಲಿ ಮತ್ತು ಪಾದಚಾರಿ ಮಾರ್ಗಗಳಲ್ಲಿ ಕಲ್ಲು, ಮಣ್ಣನ್ನು ಹಾಕಿರುತ್ತಾರೆ ಇದರಿಂದ ಸಾರ್ವಜನಿಕರ ಒಡಾಟಕ್ಕೆ ಹಾಗೂ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದು ತಿಳಿಸಲಾಗಿದೆ. ಇದಕ್ಕೆ ವಾರ್ಡ್ ಅಭಿಯಂತರರು ಸಮಸ್ಯೆ ಪರಿಹರಿಸಲಾಗುವುದು ಎಂದು ತಿಳಿಸಿದರು.

9. ಶ್ರೀ ಜಯಪಾಲ್ ಸದಸ್ಯರು ರವರು ಗೌತಮನಗರದ ವೆಂಕಟಮ್ಮ ರವರ ಮನೆಯ ಹತ್ತಿರ ಬೀದಿ ದೀಪ ಉರಿಯುತ್ತಿರುವುದಿಲ್ಲ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಸ್ಟ್ರೀಟ್ ಲೈಟ್ ಗುತ್ತಿಗೆದಾರರಿಗೆ ಸರಿಪಡಿಸಲು ಸೂಚಿಸಿದರು.

10. ಮಾನ್ಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಬೆಸ್ಕಾಂ ಅಧಿಕಾರಿಗಳಿಗೆ ಮತ್ತು ಸ್ಟ್ರೀಟ್ ಲೈಟ್ಸ್ ಗುತ್ತಿಗೆದಾರರು ಇಬ್ಬರು ಸಮಯವನ್ನು ನಿಗದಿಪಡಿಸಿ ಸ್ಟ್ರೀಟ್ ಲೈಟ್ಸ್ ವಾಹನದೊಂದಿಗೆ ಹೋಗಿ ವಾರ್ಡ್‌ನಲ್ಲಿ ವಿದ್ಯುತ್ ಕಂಬಗಳಿಂದ ಜೋತು ಬಿದ್ದ ಕೇಬಲ್‌ಗಳನ್ನು ತಗಿಸುವಂತೆ ಸೂಚಿಸಿದರು.

11. ಸಾರ್ವಜನಿಕರು ರವರು ಬೀದಿ ಬದಿ ವ್ಯಾಪಾರಿಗಳು ಶಂಕರನಗರದ ಮುಖ್ಯರಸ್ತೆಯಲ್ಲಿ ಮಧ್ಯ ರಾತ್ರಿ 2 ಗಂಟೆಗೆ ಗಲಾಟೆ ಮಾಡುತ್ತಿರುತ್ತಾರೆ. ಇದರಿಂದ ಶಂಕರನಗರದ ಮುಖ್ಯರಸ್ತೆಯ ನಿವಾಸಿಗಳಿಗೆ ತುಂಬಾ ತೊಂದರೆಯಾಗುತ್ತಿರುವ ಬಗ್ಗೆ ಪ್ರಸ್ತಾಪಿಸಿದರು. ಇದಕ್ಕೆ ಕಾರ್ಯದರ್ಶಿಗಳು ಈಗಾಗಲೇ ಹಲವು ಬಾರಿ ಇದರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಆದರೆ ಮತ್ತೆ ವ್ಯಾಪಾರಿಗಳು ಗಲಾಟೆ ಮಾಡುತ್ತಿರುತ್ತಾರೆ ಇದರ ಬಗ್ಗೆ ಮಾನ್ಯ ಸಚಿವರ ಗಮನಕ್ಕೆ ತರಲಾಗಿದೆ ಎಂದು ತಿಳಿಸುತ್ತಾ,

Scanned with CamScanner

ಾರಿಗಳಿಗೆ
ಬರು

ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಪ್ರಸ್ತಾಪಿತ ಪ್ರದೇಶದಲ್ಲಿ ಕಮರ್ಷಿಯಲ್ ಕಟ್ಟಡಗಳಿಗೆ ನೋಟೀಸ್ ನೀಡುವಂತೆ ಸೂಚಿಸುತ್ತೇನೆ ಎಂದು ತಿಳಿಸಿದರು.

12. ಸಾರ್ವಜನಿಕರು ರಾಜೀವ್‌ಗಾಂಧಿನಗರದ ಹತ್ತಿರ ಸ್ಕೇಟಿಂಗ್ ಗ್ರೌಂಡ್‌ನ ಫೆನ್ಸಿಂಗ್ ನನ್ನು ಕತ್ತರಿಸಿ ಗಾಂಜ ಸೇವನೆ ಮತ್ತು ಅನೈತಿಕ ಚಟುವಟಿಕೆಗಳನ್ನು ನಡೆಸುತ್ತಿರುತ್ತಾರೆ ಹಾಗೂ ಸ್ಥಳೀಯರ ಮೇಲೆ ಹಲ್ಲೆ ಮಾಡುತ್ತಿರುತ್ತಾರೆ ಆದ್ದರಿಂದ ಸದರಿ ಪ್ರದೇಶದಲ್ಲಿ ಬೀದಿ ದೀಪಗಳನ್ನು ಮತ್ತು ಸಿ.ಸಿ ಕ್ಯಾಮರಗಳನ್ನು ಅಳವಡಿಸುವಂತೆ ಕೋರಿದರು. ಇದಕ್ಕೆ ಪೋಲೀಸ್ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತೇವೆ ಎಂದು ತಿಳಿಸಿದರು ಹಾಗೂ ವಾರ್ಡ್ ಅಭಿಯಂತರರು ಸ್ಟ್ರೀಟ್ ಲೈಟ್ ಗುತ್ತಿಗೆದಾರರಿಗೆ ಬೀದಿ ದೀಪವನ್ನು ಸರಿಪಡಿಸಲು ಸೂಚಸಿದಿರು ಹಾಗೂ ಹೊಸದಾಗಿ ಸಿಸಿ ಕ್ಯಾಮರಗಳನ್ನು ಅಳವಡಿಸಲು ಈಗಾಗಲೇ ಕ್ರಮಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

13. ನಂದಿನಿ ಲೇಔಟ್ ಪೋಲೀಸ್ ಅಧಿಕಾರಿ ರವರು ಸಿಸಿ ಕ್ಯಾಮರಗಳ ಮಾನಿಟರಿಂಗ್ ಪೋಲೀಸ್ ಠಾಣೆಗೆ ನೀಡುವುಂತೆ ವಾರ್ಡ್ ಅಭಿಯಂತರರು ರವರಿಗೆ ಪತ್ರ ಬರೆಯಲಾಗಿದೆ ಹಾಗೂ ಪ್ರಸ್ತುತ ಸಿಸಿ ಕ್ಯಾಮರಾಗಳನ್ನು ಕೆಲಸ ಮಾಡುತ್ತಿಲ್ಲ ಎಂದು ತಿಳಿಸಿದರು. ಇದಕ್ಕೆ ವಾರ್ಡ್ ಅಭಿಯಂತರರು ಸಿಸಿ ಕ್ಯಾಮರಗಳ ವಿದ್ಯುತ್ ಸಂಪರ್ಕವನ್ನು ಬೆಸ್ಕಾಂ ಅಧಿಕಾರಿಗಳು ತೆಗೆದುಹಾಕಿರುತ್ತಾರೆ ಕಾರಣ ಪ್ರತಿಯೊಂದು ಕ್ಯಾಮರಗೆ ಪ್ರತ್ಯೇಕ ಮೀಟರ್‌ಗೆ ಪಡೆದು ವಿದ್ಯುತ್ ಸಂಪರ್ಕ ಪಡೆಯಬೇಕಾಗಿರುತ್ತದೆ. ಆದ್ದರಿಂದ ಮೀಟರ್ ಸಂಪರ್ಕ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

14. ಹಿಂದಿನ ಸಭೆಯಲ್ಲಿ 6ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆಯಲ್ಲಿ ಮ್ಯಾನ್ ಹೋಲ್ ಪಕ್ಕ ರಸ್ತೆ ಕುಸಿಯುತ್ತಿರುತ್ತದೆ ಸಮಸ್ಯೆಯನ್ನು ಪರಿಹರಿಸುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸಿರುವ ಬಗ್ಗೆ ಕೇಳಿದರು ಆದರೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರು ಸಭೆಗೆ ಹಾಜರಿರಲಿಲ್ಲ.

15. ಸಾರ್ವಜನಿಕರು ವಿಜಯಾನಂದ ನಗರದಲ್ಲಿ ಕುಡಿಯುವ ನೀರಿನ ಜೊತೆಗೆ ಒಳಚರಂಡಿ ನೀರು ಮಿಶ್ರಗೊಂಡು ಬರುತ್ತಿರುತ್ತದೆ ಆದ್ದರಿಂದ ಸ್ಥಳೀಯರಿಗೆ ನೀರನ್ನು ಸೇವಿಸಲು ಸಾದ್ಯವಾಗುತ್ತಲ್ಲ ಆದ್ದರಿಂದ ಸದರಿ ಸಮಸ್ಯೆಯನ್ನು ಪರಿಹರಿಕೊಡುವಂತೆ ಸೂಚಿಸಿದರು. ಇದಕ್ಕೆ ವಾರ್ಡ್ ಅಭಿಯಂತರರು ಸಂಬಂದಪಟ್ಟ ಅಧಿಕಾರಿಗಳು ಸೂಚಿಸಲಾಗುವುದು ಎಂದು ತಿಳಿಸಿದರು.

16. ಶ್ರೀ ಜಯಪಾಲ್ ರವರು ಆರ್‌ಎಂಸಿ ಯಾರ್ಡ್ ಹತ್ತಿರ ಗೋಡೆಯು ಕುಸಿಯುವ ಮಟ್ಟದಲ್ಲಿರುತ್ತದೆ, ಇದರಿಂದ ಗೋಡೆಯ ಕುಸಿದರೆ ಪಕ್ಕದಲ್ಲಿ ಕಟ್ಟಡಗಳಲ್ಲಿ ವಾಸವಾಗಿರುವ ನಿವಾಸಿಗಳಿಗೆ ತುಂಬ ತೊಂದರೆಯಾಗುತ್ತದೆ ಆದ್ದರಿಂದ ಗೋಡೆಯನ್ನು ತೆರವುಗೊಳಿಸುವಂತೆ ಕೋರಿದರು. ಇದಕ್ಕೆ ಅಭಿಯಂತರರು ಸಮಸ್ಯೆಯನ್ನು ಪರಿಹರಿಸಲಾಗುವುದು ಎಂದು ತಿಳಿಸಿದರು.

17. ಸಾರ್ವಜನಿಕರು ಕಿರ್ಲೋಸ್ಕರ್ ಫೌಂಡ್ರಿ ಹತ್ತಿರು ಒಂದು ಅಂಗನವಾಡಿ ಕೇಂದ್ರವನ್ನು ಸ್ಥಾಪಿಸುವಂತೆ ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಒಂದು ವಾರ್ಡ್‌ಗೆ ಮೂರು ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಲು ಮಾತ್ರ ಅನುಮತಿ ಇರುತ್ತದೆ ಹಾಗೂ ಪ್ರತಿ ಅಂಗನವಾಡಿ ಕೇಂದ್ರಕ್ಕೆ ಕನಿಷ್ಟ 500 ಮೀಟರ್ ದೂರ ಹಾಗೂ 25 ಮಕ್ಕಳು ಇರಬೇಕು ಎಂದು ತಿಳಿಸುತ್ತಾ, ಹೊಸದಾಗಿ ಅಂಗನವಾಡಿ ಕೇಂದ್ರ ನಿರ್ಮಸಬೇಕು ಎಂದರೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆರವರಿಂದ ಅನುಮತಿ ಪಡೆಯ ಬೇಕಾಗಿರುತ್ತದೆ ಎಂದು ತಿಳಿಸಿದರು.

18. ಸಾರ್ವಜನಿಕರು ವಿಜಯಾನಂದನಗರದ 5ನೇ ಮುಖ್ಯರಸ್ತೆಯಲ್ಲಿ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಸಂಬಂದಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗುವುದು ಎಂದು ತಿಳಿಸಿದರು.

Scanned with CamScanner

19. ಡಾ|| ನಾಗೇಂದ್ರ ರವರು ಕಣ್ವ ಆಸ್ಪತ್ರೆ ಹತ್ತಿರ ಬೀದಿ ದೀಪ ಉರಿಯುತ್ತಿರುವುದಿಲ್ಲ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಸ್ಟ್ರೀಟ್ ಲೈಟ್ ಗುತ್ತಿಗೆದಾರರಿಗೆ ಸರಿಪಡಿಸಲು ಸೂಚಿಸಿದರು.

20. ಡಾ|| ನಾಗೇಂದ್ರ ರವರು ಸ್ವ್ಯಾಚ್ಯುಗಳು ಹತ್ತಿರ ಮತ್ತೆ ಕಸವನ್ನು ಹಾಕುತ್ತಿರುತ್ತಾರೆ ಎಂದು ತಿಳಿಸಿದರು. ಇದಕ್ಕೆ ವಾರ್ಡ್ ಅಭಿಯಂತರರು ಸಿಸಿ ಕ್ಯಾಮರಗಳನ್ನು ಹಾಕಿ ವ್ಯಾಕ್ತಿಗಳನ್ನು ಗುರುತಿಸಿ ದಂಡ ವಿಧಿಸೋಣ ಎಂದು ಸಭೆಗೆ ತಿಳಿಸಿದರು.

21. ಮುನೇಶ್ವರ ದೇವಸ್ಥಾನದ ಹತ್ತಿರ 5ನೇ ಮುಖ್ಯರಸ್ತೆಯಲ್ಲಿ ಹಾಗೂ ಗೌತಮನಗರದಲ್ಲಿ ಯು.ಜಿ.ಡಿ ಲೈನ್ ಇರುವುದಿಲ್ಲ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಸಂಬಂದಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗುವುದು ಎಂದು ತಿಳಿಸಿದರು.

22. ಸಾರ್ವಜನಿಕರು ಥೀನ್ ಬಂದನ್ ನಗರದ 4ನೇ ಮುಖ್ಯರಸ್ತೆಯಲ್ಲಿ ಸ್ಯಾನಿಟರಿ ಲೈನ್ ಸಮಸ್ಯೆ ಬಗ್ಗೆ ಹೇಳಿದರು ಇದಕ್ಕೆ ಮಾನ್ಯ ಅಧ್ಯಕ್ಷರು ಈಗಾಗಲೇ ಸಂಬಂದಪಟ್ಟ ಅಧಿಕಾರಿಗಳು ಸ್ಥಳಕ್ಕೆ ಬೇಟಿ ನೀಡಿ ಸ್ಥಳ ಪರಿಶೀಲಿಸಿ ಸಮಸ್ಯೆಯನ್ನು ಪರಿಹರಿಸಲು ಸೂಕ್ತ ಕ್ರಮಕೈಗೊಳ್ಳುತ್ತಿರುತ್ತಾರೆ ಎಂದು ತಿಳಿಸಿದರು.

23. ಶ್ರೀಮತಿ ರಶ್ಮಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರು ಸ್ವಚ್ಛ ಸರ್ವೇಕ್ಷಣ 2021 ರ ಬಗ್ಗೆ ತಿಳಿಸಿ ಸಾರ್ವಜನಿಕರಿಂದ ಬೆಂಗಳೂರು ನಗರದ ಪರವಾಗಿ ಮತ ಚಲಾಯಿಸಲು ಸಭೆಯಲ್ಲಿ ಹಾಜರಿದ್ದವರಿಗೆ ಕೋರಿದರು.

24. ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ಅಧ್ಯಕ್ಷರು

K. [signature]

ವಾರ್ಡ್ ಕಮಿಟಿ,
ವಾರ್ಡ್.ಸಂಖ್ಯೆ.44
ಮಾರಪ್ಪನಪಾಳ್ಯ

Scanned with CamScanner